ಮಲೆನಾಡು ಅಭಿವೃದ್ಧಿ ಮಂಡಳಿ

1148. ಶ್ರೀಮತಿ ಮೋಟಮ್ಮ (ಮೂಡಿಗೆರೆ) :– ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಮಲೆನಾಡು ಅಭಿವೃದ್ಧಿ ಮಂಡಳಿಯು ಎಂದಿನಿಂದ ಜಾರಿಗೆ ಬಂದಿತು ;
ಆ) ಈ ಅಭಿವೃದ್ಧಿ ಮಂಡಳಿಗೆ ಆಯವ್ಯಯದಲ್ಲಿ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ ;
ಇ) ಚಿಕ್ಕಮಗಳೂರು ಜಿಲ್ಲೆಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಬಿಡುಗಡೆಯಾದ ಹಣವೆಷ್ಟು ; ಇದಕ್ಕೆ ಸೇರಿದ ತಾಲ್ಲೂಕುಗಳು ಯಾವುವು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) –

ಅ) ಇನ್ನೂ ಜಾರಿಗೆ ಬಂದಿಲ್ಲ.
ಆ) 1991–92ನೇ ಸಾಲಿನಲ್ಲಿ ಈ ಮಂಡಳಿಗೆ ಆಯವ್ಯಯದಲ್ಲಿ 10 ಕೋಟಿ ರೂ.ಗಳ ಅನುದಾನ ನೀಡಲಾಗಿದೆ.
ಇ) ಇದುವರೆವಿಗೂ ಯಾವ ಜಿಲ್ಲೆಗೂ ಹಣವನ್ನು ಬಿಡುಗಡೆ ಮಾಡಿಲ್ಲ. ಚಿಕ್ಕಮಗಳೂರು ಜಿಲ್ಲೆಯ ಈ ಕೆಳಕಂಡ ತಾಲೂಕುಗಳು ಮಲೆನಾಡು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಸೇರಿವೆ.
ಕೊಪ್ಪ, ಮೂಡಿಗೆರೆ, ಶೃಂಗೇರಿ, ಚಿಕ್ಕಮಗಳೂರು, ನರಸಿಂಹರಾಜಪುರ ಮತ್ತು ತರೀಕೆರೆ.

ಕರ್ನಾಟಕ ಬಂದ್ ಸಮಯದಲ್ಲಿ ನಡೆದ ಹಿಂಸಾತ್ಮಕ ಘಟನೆಗಳು.

170. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ) :– ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) 1991ರ ಡಿಸೆಂಬರ್‌ನಲ್ಲಿ ನಡೆದ ಕರ್ನಾಟಕ ಬಂದ್ ಸಮಯದಲ್ಲಿ ರಾಜ್ಯದ ಸಾರ್ವಜನಿಕರ ಹಾಗೂ ಸರ್ಕಾರದ ಆಸ್ತಿ-ಪಾಸ್ತಿಗೆ ಆದ ಹಾನಿ ಎಷ್ಟು ;
ಆ) ಈ ಬಂದ್ ಸಮಯದಲ್ಲಿ ಒಟ್ಟು ಮೃತರಾದವರ ಸಂಖ್ಯೆ ಎಷ್ಟು ; (ಪ್ರೋಲೀಸ್ ಗೋಲಿಬಾರ್ ನಿಂದ ಹಾಗೂ ಘರ್ಷಣೆಯಿಂದ ಆದ ವಿವರಗಳನ್ನು ನೀಡುವುದು) ;
ಇ) ಬಂದ್ ಸಮಯದಲ್ಲಿ ಮೃತರ ಕುಟುಂಬ ವರ್ಗದವರಿಗೆ ಹಾಗೂ ಆಸ್ತಿ-ಪಾಸ್ತಿಯನ್ನು ಕಳೆದುಕೊಂಡವರಿಗೆ ಸರ್ಕಾರದಿಂದ ಎಷ್ಟು ಪರಿಹಾರ ಹಣವನ್ನು ನೀಡಲಾಗಿದೆ (ವಿವರಗಳನ್ನು ನೀಡುವುದು) ;

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) –

ಅ) 1) <u>ಸಾರ್ವಜನಿಕರ (ಖಾಸಗಿ) ಆಸ್ತಿ :</u>

ಬೆಂಗಳೂರು ನಗರ	-	ರೂ. 19,85,40,034–00
ಮೈಸೂರು ನಗರ	-	ರೂ. 17,41,141–00
ಮಂಡ್ಯ ಜಿಲ್ಲೆ	-	ರೂ. 47,24,992–00
ಮೈಸೂರು ಜಿಲ್ಲೆ	-	ರೂ.10,16,30,000–00
ಸಣ್ಣ ಕೈಗಾರಿಕೆಗಳು	-	ರೂ.15,43,98,000–00

(ಬನ್ನಾರಿ ಅಮ್ಮಾನ್ ಸಕ್ಕರೆ ಕಾರ್ಖಾನೆಗೆ ಸಂಭಂದಿಸಿದ ನಷ್ಟವನ್ನು ಅಂದಾಜು ಮಾಡಬೇಕಾಗಿದೆ.

2) <u>ಸರ್ಕಾರದ ಆಸ್ತಿ :-</u>

ಬೆಂಗಳೂರು ನಗರ	-	ರೂ. 62,72,800–00
ಮೈಸೂರು ನಗರ	-	ರೂ. 84,000–00
ಮಂಡ್ಯ ಜಿಲ್ಲೆ	-	ರೂ. 23,86,050–00
ಬೆಂಗಳೂರು ಜಿಲ್ಲೆ	-	ರೂ. 17,000–00

ಅ) 1) ಪೋಲೀಸ್ ಗೋಲೀಬಾರ್‌ನಲ್ಲಿ ಸತ್ತವರ ಸಂಖ್ಯೆ :-

ಬೆಂಗಳೂರು ನಗರ	- 16

2) ಘರ್ಷಣೆಯಲ್ಲಿ ಸತ್ತವರ ಸಂಖ್ಯೆ :-

ಬೆಂಗಳೂರು ನಗರ	- 5

ಆ) 1) ಮೃತಪಟ್ಟವರಿಗೆ ನೀಡಲಾದ ಪರಿಹಾರ :-

ಬೆಂಗಳೂರು ನಗರ	- ರೂ. 10,50,000-00

2) ಆಸ್ತಿ ಕಳೆದುಕೊಂಡವರಿಗೆ ಇಲ್ಲಿಯವರೆಗೆ ನೀಡಲಾದ ಪರಿಹಾರ :-

ಮೈಸೂರು ಜಿಲ್ಲೆ	–	ರೂ.1,12,29,595-00
ಮಂಡ್ಯ ಜಿಲ್ಲೆ	–	ರೂ. 6,69,439-00
ಬೆಂಗಳೂರು ನಗರ	–	ರೂ.1,85,99,750-00

ನಗರ ಪ್ರದೇಶಗಳಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣಗಳನ್ನು ಸಕ್ರಮಗೊಳಿಸುವಿಕೆ.

19. ಶ್ರೀ ಎಸ್. ಶಫಿ ಅಹಮದ್ (ತುಮಕೂರು) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ನಗರ ಪ್ರದೇಶಗಳಲ್ಲಿ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ;

ಆ) ಈ ಬಗ್ಗೆ ನಾನಾ ಮುನ್ಸಿಪಾಲಿಟಿಗಳಲ್ಲಿ ವಿಧಿಸಲುದ್ದೇಶಿಸಿದ ಬೆಲೆ ಹಾಗೂ ನೀತಿಗಳೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) –

ಅ) ಹಿಂದಿನ ಅಧಿವೇಶನದಲ್ಲಿ ನಗರ ಪ್ರದೇಶಗಳಲ್ಲಿ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸಲು ವಿಧೇಯಕವನ್ನು ಅಂಗೀಕರಿಸಲಾಗಿತ್ತು. ಈ ಬಗ್ಗೆ ಕಾಯ್ದೆಯನ್ನು ಸಹ ನವೆಂಬರ್ 91 ರಲ್ಲಿ ಹೊರಡಿಸಲಾಗಿದೆ. ಈ ಬಗ್ಗೆ ನಿಯಮಗಳನ್ನು ಹೊರಡಿಸುವುದು ಸರ್ಕಾರದ, ಪರಿಶೀಲನೆಯಲ್ಲಿದೆ.

ಆ) ಉದ್ದೇಶಿತ ಬೆಲೆಗಳ ತಃಖ್ತೆಯನ್ನು ಲಗತ್ತಿಸಿದೆ.

ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವ ತಃಖ್ತೆ

ಸ್ಥಳ	ಅಳತೆ	ಸರ್ಕಾರದ ಜಮೀನು ಬಿಡಿಎ ನುತ್ತು ಇತರೆ ಸ್ಥಳೀಯ ಸಂಸ್ಥೆ	ಖಾಸಗಿ ಜಮೀನು
ಬೆಂಗಳೂರು	15 x 20	08,400	08,400
	20 x30	16,800	16,800
	30 x 40	33,600	33,600
	40 x 60	ಬಿಡಿಎ ದರದ ಎರಡರಷ್ಟು	ಬಿಡಿಎ ದರ
	60 x 80	ಬಿಡಿಎ ದರದ ಎರಡರಷ್ಟು	ಬಿಡಿಎ ದರ
ಅಭಿವೃದ್ಧಿ ಮಂಡಳಿ ಮತ್ತು ನಗರ ಪಾಲಿಕೆ		ಅಭಿವೃದ್ಧಿ ಪ್ರಾಧಿಕಾರದ ದರ	ಅಭಿವೃದ್ಧಿ ಪ್ರಾಧಿಕಾರದ ದರ
ಸ್ಥಳಗಳಲ್ಲಿ	60 x 80	ಸಮೀಪದಲ್ಲಿರುವ ಅಭಿವೃದ್ಧಿ	ಸಮೀಪದಲ್ಲಿರುವ ಅಭಿವೃದ್ಧಿ
ಮುನ್ಸಿಪಾಲಿಟಿಗಳಲ್ಲಿ	60 x 80	ಪ್ರಾಧಿಕಾರದ ಅರ್ಧದಷ್ಟು	ಪ್ರಾಧಿಕಾರದ ಅರ್ಧದಷ್ಟು